## 1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಕೆ.ಆರ್.ನಗರ.

**Crl.Misc No**.239/2025

**PW** : 1

**ದಿನಾಂಕಃ 30-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರುಃ** | **ಹರ್ಷಿತಾ** |
| **ಗಂಡನ ಹೆಸರುಃ** | **ರಾಕೇಶ್** |
| **ವಯಸ್ಸುಃ** | **21 ವರ್ಷ** |
| **ಉದ್ಯೋಗಃ** | **ಗೃಹಿಣಿ** |
| **ವಾಸ ಸ್ಥಳಃ** | **ಕೆಡಗ ಗ್ರಾಮ, ಸಾಲಿಗ್ರಾಮ** |

**ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿಃ ಶ್ರೀ.ಬಿ.ಎಸ್.ಕೆ. ವಕೀಲರಿಂದಃ**

1. ದಿ. 07.06.2021 ರಂದು ಅರಸೀಕೆರೆಗೆ ಹೋಗುವ ಮಾರ್ಗ ಮಧ್ಯ ಸಿಗುವ ಶನಿದೇವರ ದೇವಸ್ಥಾನದಲ್ಲಿ ನನ್ನ ಮತ್ತು ಎದುರುದಾರನ ಮದುವೆ ಆಗಿರುತ್ತದೆ. ನನ್ನ ಮತ್ತು ಎದುರುದಾರನ ದಾಂಪತ್ಯ ಜೀವನದಿಂದ ನಮಗೆ 2 ನೇ ಅರ್ಜಿದಾರಳು ಜನಿಸಿರುತ್ತಾಳೆ. ಮದುವೆಯಾದ ನಂತರ ನಾನು ಮತ್ತು ಎದುರುದಾರ ಸುಮಾರು 2 ವರ್ಷಗಳ ಕಾಲ ಅನೋನ್ಯವಾಗಿ ದಾಂಪತ್ಯ ಜೀವನ ನಡೆಸಿರುತ್ತೇವೆ. ನಂತರದಲ್ಲಿ ಎದುರುದಾರನು ಸಾರಾಯಿ ಕುಡಿಯುವುದು ಹಾಗೂ ಬೇರೆ ಮಹಿಳೆಯರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಳ್ಳುವುದು ಈ ರೀತಿ ಹಲವಾರು ದುಷ್ಚಟಗಳನ್ನು ಬೆಳೆಸಿಕೊಂಡು ನನಗೂ ಮತ್ತು 2 ನೇ ಅರ್ಜಿದಾರಳಿಗೂ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡುತ್ತಾ ಬಂದಿರುತ್ತಾರೆ.

2. ಎದುರುದಾರನಿಗೆ ಜೆ.ಸಿ.ಬಿ. ಇದ್ದು ಅದರಿಂದ ಎದುರುದಾರನಿಗೆ ಒಂದು ತಿಂಗಳಿಗೆ ಒಂದು ಲಕ್ಷ ಆದಾಯ ಬರುತ್ತದೆ. ಎದುರುದಾರನಿಗೆ ಒಳ್ಳೆಯ ಆದಾಯ ಇದ್ದರು ಸಹ ಎದುರುದಾರ ನನ್ನನ್ನು ಮತ್ತು 2 ನೇ ಅರ್ಜಿದಾರಳನ್ನು ಸಾಕದೇ ನಿರ್ಲಕ್ಷಿಸಿರುತ್ತಾರೆ. ಊರಿನಲ್ಲಿ ಹತ್ತು ಬಾರಿ ನ್ಯಾಯ ಪಂಚಾಯಿತಿಕೆ ಮಾಡಿದರು ಸಹ ಎದುರುದಾರ ತನ್ನ ವರ್ತನೆಯನ್ನು ಬದಲಾಯಿಸಿರುವುದಿಲ್ಲ. ಈಗ ಒಂದುವರೆ ವರ್ಷಗಳಿಂದ ಎದುರುದಾರ ನನ್ನನ್ನು ಮತ್ತು 2 ನೇ ಅರ್ಜಿದಾರಳನ್ನು ನೋಡಲು ಸಹ ಬಂದಿರುವುದಿಲ್ಲ. ನಾನು ಮತ್ತು 2 ನೇ ಅರ್ಜಿದಾರಳು

ಎದುರುದಾರನ ಎದುರು ಹೋದರೆ ನಮಗಿಬ್ಬರಿಗೂ ಸಹ ಎದುರುದಾರ ಬಾಯಿಗೆ ಬಂದ ಹಾಗೆ ಬೈಯುತ್ತಾರೆ. ಅಷ್ಟೇ ಅಲ್ಲದೇ ನನಗೂ ಮತ್ತು 2 ನೇ ಅರ್ಜಿದಾರಳಿಗೂ ಹೊಡೆದು ಹಲ್ಲೆ ಮಾಡಿರುತ್ತಾರೆ. ಎದುರುದಾರ 2 ನೇ ಅರ್ಜಿದಾರಳಿಗೆ ಹೊಡೆದ ಕಾರಣ 2 ನೇ ಅರ್ಜಿದಾರಳ ಕೈಗೆ ಏಟಾಗಿರುತ್ತದೆ.

3. ನನ್ನ ತವರು ಮನೆಯವರು ಆರ್ಥಿಕವಾಗಿ ತೀರಾ ಬಡವಾಗಿರುತ್ತಾರೆ. ಈಗ 2 ವರ್ಷಗಳಿಂದ ನಾನು ಮತ್ತು 2 ನೇ ಅರ್ಜಿದಾರಳು ನನ್ನ ತವರು ಮನೆಯಲ್ಲಿ ವಾಸಮಾಡುತ್ತಿದ್ದೇವೆ. ನನ್ನ ತವರು ಮನೆಯವರಿಗೆ ನನ್ನನ್ನು ಮತ್ತು 2 ನೇ ಅರ್ಜಿದಾರಳನ್ನು ಸಾಕುವ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ.

3. ನಾನು ಮತ್ತು 2 ನೇ ಅರ್ಜಿಯದಾರಳು ಇಲ್ಲಿಯವರೆಗೆ ನನ್ನ ತವರು ಮನೆಯಲ್ಲಿ ಇರುತ್ತೇನೆ. ಇಂದಿನವರೆಗೂ ನಮ್ಮ ಜೀವನಾಂಶಕ್ಕಾಗಿ ಎದುರುದಾರ ಯಾವುದೇ ಖರ್ಚನ್ನು ನೀಡಿರುವುದಿಲ್ಲ. ಎದುರುದಾರನಿಗೆ ನಮ್ಮನ್ನು ಸಾಕುವಷ್ಟು ಆರ್ಥಿಕ ಹಾಗೂ ದೈಹಿಕ ಸಾಮರ್ಥ ಇರುತ್ತದೆ. ನಮ್ಮನ್ನು ಸಾಕುವ ಆರ್ಥಿಕ ಸಾಮರ್ಥ ಇದ್ದರು ಸಹ ಎದುರುದಾರನು ನಮ್ಮನ್ನು ನಿರ್ಲಕ್ಷಿಸಿರುತ್ತಾರೆ. ನಾನು ಮತ್ತು 2 ನೇ ಅರ್ಜಿಯದಾರಳು ನಮ್ಮ ಜೀವನಾಂಶಕ್ಕಾಗಿ ಎದುರುದಾರನನ್ನೆ ಅವಲಂಭಿಸಿರುತ್ತೇನೆ. ನನ್ನ ಮತ್ತು 2 ನೇ ಅರ್ಜಿದಾರಳ ಜೀವನಾಂಶಕ್ಕೆ, ವೈದ್ಯಕೀಯ ಖರ್ಚು ವೆಚ್ಚ ಹಾಗೂ ವಸತಿ ಮತ್ತು ಬಟ್ಟೆಗಳಿಗೆ ಹಾಗೂ 2 ನೇ ಅರ್ಜಿದಾರಳ ವಿದ್ಯಾಭ್ಯಾಸಕ್ಕೆ ಒಟ್ಟಾಗಿ ತಿಂಗಳಿಗೆ 20 ಸಾವಿರ ರೂ. ಬೇಕಾಗುತ್ತದೆ. ಎದುರುದಾರನಿಗೆ ನಮ್ಮನ್ನು ಸಾಕುವಷ್ಟು ಆರ್ಥಿಕ ಹಾಗೂ ದೈಹಿಕ ಸಾಮರ್ಥ ಇರುತ್ತದೆ. ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ನೀಡಲು ಪ್ರಾರ್ಥನೆ.

ಪೊಟೋವನ್ನು ನಿಪಿ.1 ರಿಂದ 4 ಎಂದು, 2 ನೇ ಅರ್ಜಿದಾರಳ ಜನನ ಪ್ರಮಾಣ ಪತ್ರವನ್ನು ನಿಪಿ.5 ಎಂದು ಗುರುತಿಸಲಾಯಿತು.

**ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**